### ಅಧಿಕಾರಶಾಹಿ ಅತ್ಯಾಚಾರ

ಮೇಲಧಿಕಾರಿಗಳು ಕೆಳಗಿನ ನೌಕರರ ಮೇಲೆ ಬಡ್ತಿಯ ಆಮಿಷವೊಡ್ಡಿ ಅತ್ಯಾಚಾರ ನಡೆಸುವುದು ಸಾರ್ವಜನಿಕ ರಹಸ್ಯವಾಗಿದೆ. ನನಗೆ ಗೊತ್ತಿರುವ ಒಬ್ಬಳನ್ನು ಆಕೆಯ ವಿವಾಹಿತ ಮೇಲಧಿಕಾರಿ ಅವಳಿಲ್ಲದೆ ಬದುಕಲಾರೆನೆಂದು ಅತ್ತುಕರೆದು ಖಾಸಗಿಯಾಗಿ ತಾಳಿ ಕಟ್ಟಿದ. ಒಂದು ವರ್ಷ ಜೊತೆಗಿದ್ದ ನಂತರ ಕೈಬಿಟ್ಟು ಕೈಗೆ ಸಿಗದಾದ. ಮುಂದೊಂದು ಸಲ ವರ್ಗಾವಣೆಯಾಗಿ ಇಬ್ಬರೂ ಒಂದೇ ಆಫೀಸಿನಲ್ಲಿ ಕೆಲಸ ಮಾಡಬೇಕಾಗಿ ಬಂದಾಗ ಅವನೇನು ಮಾಡಿದ? ಅವಳೆದುರಿಗೆ ಇನ್ನೊಬ್ಬಳನ್ನು ತೊಡೆಯ ಮೇಲೆ ಕೂಡಿಸಿಕೊಂಡು ಈಕೆಯನ್ನು ದೂರ ನಿಲ್ಲಿಸಿ ಜಬರದಸ್ತಾಗಿ ಮಾತಾಡಿದ. ಈಕೆಯನ್ನು ಮಾತಾಡಿಸಿದಾಗ ಬಂದ ಉತ್ತರ ಕರುಳು ಕತ್ತರಿಸುವಂತಿದೆ.

‘ಹೀಗೆ ಯಾರೊಂದಿಗೂ ಹಂಚಿಕೊಳ್ಳದೆ ಪ್ರತಿದಿನವೂ ಒಂಟಿಯಾಗಿ ನರಳಿ ಸಾಯುವುದಕ್ಕಿಂತ ಅತ್ಯಾಚಾರಕ್ಕೆ ಒಳಗಾಗಿ ಒಂದೇ ಸಲ ಸಾಯುವುದು ಲೇಸು.’

ಇನ್ನೊಂದು ಸಂದರ್ಭದಲ್ಲಿ ಸ್ವಾಮಿಗಳೊಬ್ಬರು ಅತ್ಯಾಚಾರದ ಪ್ರಕರಣಕ್ಕೆ ಒಳಗಾಗಿ, ‘ಅವರದು ಅತ್ಯಾಚಾರವಲ್ಲ, ಕೇವಲ ಅನೈತಿಕ ಸಂಬಂಧ’ ಎಂದು ನ್ಯಾಯನಿರ್ಣಯ ಆಗಿ ಪಾರಾಗಬೇಕು ಎನ್ನುವಾಗ, ತಮ್ಮ ಅಪ್ರಾಪ್ತೆ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಮಾಡಿದ ಇನ್ನೊಂದು ಆರೋಪ ಎದುರಿಸುತ್ತಿದ್ದಾರೆ. ಮನೋವೈಜ್ಞಾನಿಕ ದೃಷ್ಟಿಕೋನದಿಂದ ನೋಡುವುದಾದರೆ ಇವರಿಬ್ಬರೂ ಇತರ ಅತ್ಯಾಚಾರಿಗಳಷ್ಟೇ ವಿಕೃತ ಮನಸ್ಸಿನವರು ಅನ್ನಿಸಿಕೊಳ್ಳುತ್ತಾರೆ.

### ದಾಂಪತ್ಯದಲ್ಲಿ ಅತ್ಯಾಚಾರ

ಹೆಚ್ಚಿನ ನಿಯೋಜಿತ ದಾಂಪತ್ಯಗಳು ಗಂಡಿನ ಕಾಮದಾಸೆಯ ಪೂರೈಕೆ ಹಾಗೂ ಹೆಣ್ಣಿನ ಭದ್ರತೆಯ ಆಧಾರದ ಮೇಲೆ ನಿಂತಿವೆ. ಇಲ್ಲಿ ಗಂಡು ಬಯಸಿದಾಗ ಹೆಣ್ಣು ಇಷ್ಟವಿಲ್ಲದಿದ್ದರೂ ಒಪ್ಪಿಸಿಕೊಳ್ಳಬೇಕು ಎಂಬ ಹಕ್ಕೊತ್ತಾಯವಿದೆ. ಪರಿಣಾಮವಾಗಿ ನಮ್ಮ ಸಾಕಷ್ಟು ದಾಂಪತ್ಯಗಳಲ್ಲಿ ಸೌಮ್ಯ ಪ್ರಮಾಣದ ಅತ್ಯಾಚಾರ, ಇಷ್ಟವಿಲ್ಲದ ಗರ್ಭಧಾರಣೆ ನಡೆಯುತ್ತಿದೆ; ಆದರೆ ಹೆಂಡಂದಿರಿಗೆ ಕಾನೂನಿನ ರಕ್ಷಣೆಯಿಲ್ಲ! ಕೆಲವೇ ವರ್ಷಗಳ ಹಿಂದೆ ದಾಂಪತ್ಯದ ಅತ್ಯಾಚಾರಕ್ಕೆ ತಡೆಹಾಕಲು ಕಾನೂನು ತರುವ ಪ್ರಸ್ತಾವ ಬಂತು. ಆಗ ಕೇಂದ್ರ ಗೃಹ ಮಂತ್ರಿವರ್ಯರು ಒಪ್ಪಲಿಲ್ಲ. ಯಾಕೆ? ನಮ್ಮ ಹಳ್ಳಿಯ ಗಂಡಸರು ಇದನ್ನೆಲ್ಲ ಅರ್ಥಮಾಡಿಕೊಳ್ಳಲಾರರು. ಇದರರ್ಥ ಸ್ಪಷ್ಟವಾಗಿದೆ. ಗಂಡು ಸಂವೇದನಾರಹಿತ ಆಗಿದ್ದು ತನ್ನ ಗಂಡಸುತನದಿಂದ ಹೆಣ್ಣನ್ನು ಘಾತಿಸುತ್ತಿದ್ದರೆ ಅದರ ದುಷ್ಪರಿಣಾಮವನ್ನು ಹೆಣ್ಣು ಮೌನವಾಗಿ ಭರಿಸಬೇಕು! ಇದು ಯಾವ ಅತ್ಯಾಚಾರಕ್ಕೂ ಕಡಿಮೆಯಿಲ್ಲ.

ಒಂದು ಪ್ರಸಂಗದಲ್ಲಿ ದಿನಕ್ಕೆ ಐದಾರು ಸಲ ಕೂಡುವ ಗಂಡಸಿನಿಂದ ಕಾಪಾಡಲು ಈಕೆಯನ್ನು ಮಕ್ಕಳು ಕೋಣೆಯಲ್ಲಿ ಕೂಡಿಟ್ಟು ಬೀಗಹಾಕಿ ಕಾವಲು ನಿಂತರು. ಆಗ ಗಂಡ ಮಾಳಿಗೆಯ ಹೆಂಚು ತೆಗೆದು ಒಳಗಿಳಿದು ತನ್ನ ಕಾಯಕ ಪೂರೈಸಿಕೊಂಡ!

### ಹೆಣ್ಣೂ ನಡೆಸಬಲ್ಲಳು

ಅಪರೂಪವಾದರೂ ಸತ್ಯ: ಹೆಣ್ಣೂ ಅತ್ಯಾಚಾರ ಮಾಡಬಲ್ಲಳು. ಹನ್ನೆರಡು ವರ್ಷಗಳ ಹಿಂದಿನ ಘಟನೆ ನೆನಪಿಗೆ ಬರುತ್ತದೆ. ಉದ್ಯಾನದಲ್ಲಿ ಕುಳಿತ ವೃದ್ಧನನ್ನು ಮೂವರು ತರುಣಿಯರು ಮನೆಗೆ ಆಹ್ವಾನಿಸಿದ್ದಾರೆ. ಅವನ ಮೇಲೆ ಮುಗಿಬಿದ್ದು ನಗ್ನಗೊಳಿಸಿ ಒಬ್ಬರ ನಂತರ ಒಬ್ಬರು ಸುಖಪಡುತ್ತಾರೆ. ಆಘಾತಕ್ಕೆ ಒಳಗಾದ ಆ ಗಂಡಸು ಹೊರಹೋಗಲು ಭಯಪಟ್ಟು ಮನೆಯಲ್ಲಿದ್ದು ಖಿನ್ನತೆಯಿಂದ ನರಳುತ್ತಾನೆ. ನಾಝಿ ಶಿಬಿರಗಳಲ್ಲಿ ಕಾವಲು ಹೆಂಗಸರು ಯಹೂದಿ ಹೆಂಗಸರನ್ನು ಮೇಜಿಗೆ ಕಟ್ಟಿಹಾಕಿ ಅವರ ಜನನಾಂಗವನ್ನು ನಾನಾ ವಸ್ತುಗಳಿಂದ ಘಾತಿಸಿದ್ದು ಇದೆ. ಎಡಿನ್‌ಬರ್ಗ್‌ನಲ್ಲಿ (2007) ನಡೆದ ಅತ್ಯಾಚಾರವು ನನ್ನ ಪ್ರಕಾರ ಅತ್ಯಂತ ಭೀಕರ. ಇದರಲ್ಲಿ ಕ್ಯಾರೊಲಿನ್ ಡನ್ಸ್‌ಮೋರ್ ಎಂಬಾಕೆ ತನ್ನ ಒಂಬತ್ತು ಹಾಗೂ ಐದು ವರ್ಷದ ಹೆಣ್ಣುಮಕ್ಕಳನ್ನು ಉಪಯೋಗಿಸಿಕೊಳ್ಳಲು ಇಬ್ಬರು ಶಿಶುಕಾಮಿ ಗಂಡಸರನ್ನು ಆಹ್ವಾನಿಸಿ, ಅವರು ನಡೆಸುವ ಕೃತ್ಯವನ್ನು ನಿಂತು ವೀಕ್ಷಿಸುತ್ತಾಳೆ. ನಂಬಿದ ತಾಯಿಯಿಂದಲೇ ದ್ರೋಹಕ್ಕೆ ಒಳಗಾದ ಎಳೆಯರ ಭಯ, ಚೀರಾಟ ಊಹಿಸಿಕೊಂಡರೆ ಎಂಥವರ ಎದೆಯೂ ನಡುಗುತ್ತದೆ. ವಿಕೃತ ಮನಃಸ್ಥಿತಿ ಇದ್ದರೆ ಹೆಣ್ಣೇನು, ಗಂಡೇನು?

### ಇದೂ ಅತ್ಯಾಚಾರವೇ!

ಕೇವಲ ಹೆಣ್ಣಿನ ಮೇಲೆ ಗಂಡು ಮಾಡುವ ಬಲಾತ್ಕಾರವಲ್ಲದೆ ಇವುಗಳೂ ಅತ್ಯಾಚಾರ ಎನ್ನಿಸಿಕೊಳ್ಳುತ್ತವೆ. ಅವುಗಳೆಂದರೆ:

- ಸಂಭೋಗದ ಹೊರತಾದ ಶಾರೀರಿಕ ಸಂಪರ್ಕದಲ್ಲಿ ತೊಡಗುವುದು (ಉದಾ. ಗಂಡು ತನ್ನ ಜನನಾಂಗವನ್ನು ಒಲ್ಲದ ಹೆಣ್ಣಿನ ಕೈಯಿಂದ ಒತ್ತಾಯದಿಂದ ಮುಟ್ಟಿಸಿಕೊಳ್ಳುವುದು, ಒತ್ತಾಯದಿಂದ ಮುತ್ತಿಡುವುದು)
- ವಯಸ್ಸಾದ ಗಂಡಸರು ಅಪ್ರಾಪ್ತ ವಯಸ್ಸಿನ ಹುಡುಗ–ಹುಡುಗಿಯರನ್ನು ಭಯ, ಆಮಿಷ ತೋರಿಸಿ ಬಲೆಗೆ ಹಾಕಿಕೊಳ್ಳುವುದು – ಇವರು ಪ್ರಬುದ್ಧ ಹೆಣ್ಣಿನ ಜೊತೆಗೆ ಸಂಬಂಧ ಇಟ್ಟುಕೊಳ್ಳುವುದಕ್ಕೆ ಭಾವಬುದ್ಧಿಯಿಂದ ಅಸಮರ್ಥರಾಗಿರುತ್ತಾರೆ.
- ಪ್ರಬುದ್ಧ ಹೆಂಗಸರು ಅಪ್ರಾಪ್ತ ವಯಸ್ಸಿನ ಹುಡುಗರನ್ನು ಪುಸಲಾಯಿಸುವುದು.
- ಅಪ್ರಾಪ್ತ ವಯಸ್ಸಿನವರ ಮೈಯನ್ನು ಕಿರಿಕಿರಿ ಆಗುವಂತೆ ಮುಟ್ಟುವುದು, ಅವರಿಗೆ ಅಶ್ಲೀಲ ಚಿತ್ರಗಳನ್ನು ತೋರಿಸುವುದು, ತನ್ನ ಕಾಮಕೂಟವನ್ನು ಅವರೆದುರು ಬಣ್ಣಿಸುವುದು, ಇತ್ಯಾದಿ.
- ಭಾವನಾತ್ಮಕ ಅತ್ಯಾಚಾರ: ವ್ಯಕ್ತಿಗತ ಲಿಂಗತ್ವ, ಬಣ್ಣ, ಗಾತ್ರ, ಖಾಸಗಿ ಅಂಗಗಳ ಅಳತೆ–ಆಕಾರ ಮುಂತಾದುವುಗಳನ್ನು ಮುಂದುಮಾಡಿಕೊಂಡು ಅವಹೇಳನ ಮಾಡುವುದೂ ಅತ್ಯಾಚಾರ ಅನ್ನಿಸಿಕೊಳ್ಳುತ್ತದೆ.

### ಯುದ್ಧಾಸ್ತ್ರವಾಗಿ ಅತ್ಯಾಚಾರ

ಎರಡನೆಯ ಮಹಾಯುದ್ಧದಲ್ಲಿ ಜಪಾನಿನ ಸೈನಿಕರು, ಯಹೂದಿ ಹೆಂಗಸರ ಮೇಲೆ ಹಿಟ್ಲರನ ಸೈನಿಕರು, ಮುಸ್ಲಿಮ್ ಸ್ತ್ರೀಯರ ಮೇಲೆ ಚೀನೀ ಸೈನಿಕರು ಯಾಜ್ಹಿಡಿ ಹೆಣ್ಣುಗಳ ಮೇಲೆ ಐಎಸ್‌ಐಎಸ್ ಉಗ್ರವಾದಿಗಳು ಅವ್ಯಾಹತ ಅತ್ಯಾಚಾರ ನಡೆಸಿದ್ದಿದೆ. ಬೋಸ್ನಿಯಾ, ಲಿಬಿಯಾ, ಕಾಂಗೋ, ರುವಾಂಡಾ, ಯುಗೋಸ್ಲಾವಿಯಾ ಇನ್ನಿತರ ದೇಶಗಳಲ್ಲಿ ಯುದ್ಧ ಸೈನಿಕರು ಅತ್ಯಾಚಾರದ ಜೊತೆಗೆ ಕ್ರೌರ್ಯವೂ ವ್ಯಾಪಕವಾಗಿ ಮೆರೆದಿದೆ. ಸಿಎನ್‌ಎನ್ ಸುದ್ದಿಸಂಸ್ಥೆಯು ತನ್ನ ವರದಿಯಲ್ಲಿ (**Silence Lifted, 246 2011**) ಸೈನಿಕರ ಉರವಣಿಗೆಯನ್ನು ಹೀಗೆ ಉಲ್ಲೇಖಿಸಿದೆ: ‘ಆ ರಾತ್ರಿ ಸೈನಿಕರು ಮನೆಯಿಂದ ಆಕೆಯನ್ನು

